ಎಂದು ಇದೆ. ಅದನ್ನು ಸರಿಪಡಿಸಬೇಕು. ಅದು ರೆಕಾರ್ಡ್ ಆಗಬಾರದು. ಅದಕ್ಕೆ ತಾವು ಈ ವರ್ಷ 18 ಕೋಟಿ ರೂಪಾಯಿಗಳ ಬಜೆಟ್ ಇಟ್ಟಿದ್ದೀರಿ. ಈ 18 ಕೋಟಿ ರೂನಲ್ಲಿ ಅವರು ಏನೇನು ಕಂಡೀಷನ್ಸ್ ಹಾಕಿದ್ದಾರೆ. ಆ ಕಾರ್ಯಕ್ರಮಗಳನ್ನು ಮಾಡಬೇಕು. ಸಮತೋಲನ ಜಲಾಶಯಗಳನ್ನು ನಿರ್ಮಿಸಬೇಕು. ಡೌನ್ ಸ್ಟ್ರೀ ಆಫ್ ದಿ ರಿವರ್‌ನಲ್ಲಿ ನಾಲ್ಕು ಬ್ಯಾರೇಜುಗಳನ್ನು ಕಟ್ಟಿಸಬೇಕು ಎಂದೆಲ್ಲಾ ಹೇಳಿದ್ದಾರೆ. ಈಗ ಅವುಗಳನ್ಯಾವುದನ್ನೂ ಮಾಡುತ್ತಿಲ್ಲ. ಆದರೆ ಈಗ ಮತ್ತೆ ಮೇಲೆ ಅಣೆಕಟ್ಟು ಕಟ್ಟಲು ಹೊರಟುಬಿಟ್ಟಿದ್ದಾರೆ. ನಮ್ಮ ಜಲಾಶಯಕ್ಕೆ ನೀರು ಬರಲಾರದಂತೆ, ಈಗ ಮೇಲೆ ಅಣೆಕಟ್ಟು ಕಟ್ಟಲು ಕೆಲಸ ಪ್ರಾರಂಭ ಮಾಡಿದ್ದಾರೆ, ದಯವಿಟ್ಟು ಅದನ್ನು ಸ್ಟಾಪ್ ಮಾಡಿ. ಅದರಿಂದ ಕೆಳಗಿರತಕ್ಕಂತ 10 ಲಕ್ಷ ಎಕರೆಗೆ ತೊಂದರೆಯಾಗುತ್ತದೆ. ಅದಕ್ಕೆ ಬೇಕಾಗಿರುವಂತೆ ಡೌನ್ ಸ್ಟ್ರೀಂನಲ್ಲಿ ರಿಸರ್ವಾಯರ್‌ಗಳನ್ನು ನಿರ್ಮಿಸತಕ್ಕಂಥಾದ್ದು ಮತ್ತು ಕೆ ಸಿ ರೆಡ್ಡಿಯವರು ಸೂಚಿಸಿರುವಂಥ ಇತರ ಎಲ್ಲಾ ಕ್ರಮಗಳನ್ನು ಕಾರ್ಯರೂಪಕ್ಕೆ ತಂದು, ನಂತರ ಈ ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ತಾವು ಚಾಲನೆ ನೀಡಬೇಕು. ಅದೂ ಸಹ, ಕೆ ಸಿ ರೆಡ್ಡಿಯವರು ಹೇಳಿರುವ ರೀತಿಯಲ್ಲಿ ಕೆಳಗಿರುವ ನಮ್ಮ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಕೊಟ್ಟಿರತಕ್ಕಂಥ ಅಂಕಿ ಅಂಶಗಳಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ಸರಿಪಡಿಸಿಕೊಳ್ಳುವ ಭರವಸೆಯನ್ನು ನಾನು ಕೊಡುತ್ತೇನೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇವೆ. ಈಗಾಗಲೇ ನಾವು ಸದನದಲ್ಲಿ ರಾಜ್ಯ ಸರ್ಕಾರದ ಪರವಾಗಿ ಈ ರಾಜ್ಯದ ಜನತೆಗೆ, ವಿಶೇಷವಾಗಿ ಆ ಭಾಗದ ರೈತರಿಗೆ ಭರವಸೆಯನ್ನು ಕೊಟ್ಟಿದ್ದೇವೆ, ನಿಮಗೆ ತೊಂದರೆಯಾಗದ ಹಾಗೆ ನಾವು ಕೆಲಸ ಮಾಡುತ್ತೇವೆ.

ವಿಷಯ (x) : ಕೆ.ಜಿ.ಎಫ್. ನಗರದಲ್ಲಿ ಒಳಚರಂಡಿ ವ್ಯವಸ್ಥೆ ಬಗ್ಗೆ

ಶ್ರೀ ಎಸ್. ರಾಜೇಂದ್ರನ್(ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೇ, I call the attention of the Government regarding drinking water and non-drianage system in KGF city.

†**ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಸಚಿವರು) (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ)** : ಮಾನ್ಯ ಅಧ್ಯಕ್ಷರೇ, ಕೆ.ಜಿ.ಎಫ್. ಕ್ಷೇತ್ರದ ಗೌರವಾನ್ವಿತ ಶಾಸಕರಾದ ಮಾನ್ಯ ರಾಜೇಂದ್ರನ್‌ರವರು, ಕೆ.ಜಿ.ಎಫ್. ನಗರದ ಅಸಮರ್ಪಕ ನೀರು ಸರಬರಾಜು ಅವ್ಯವಸ್ಥೆಯನ್ನು ಹಾಗೂ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ, ಅಲ್ಲಿನ ಸಾರ್ವಜನಿಕರು ಅನುಭವಿಸುತ್ತಿರುವ ಪರಿಸ್ಥಿತಿಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛೆ ಪಡುತ್ತೇನೆ.

ಕುಡಿಯುವ ನೀರು ಪೂರೈಕೆ ವ್ಯವಸ್ಥೆ :

ಕೆ.ಜಿ.ಎಫ್. ನಗರಕ್ಕೆ ಹಾಗೂ ಬಿಜಿಎಂಎಲ್ ಪ್ರದೇಶಕ್ಕೆ 1904 ರಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲು ಬೇತಮಂಗಲ ಕೆರೆಯನ್ನು ಮೂಲವಾಗಿಟ್ಟುಕೊಂಡು ಕುಡಿಯುವ ನೀರಿನ ಯೋಜನೆಯನ್ನು ಅಭಿವೃದ್ಧಿಗೊಳಿಸಲಾಗಿತ್ತು. ಕೆರೆಯ ನಿವ್ವಳ ನೀರಿನ ಸಾಮರ್ಥ್ಯವು 4130 ಎಂ.ಎಲ್.ಗಳಾಗಿದ್ದು ದಿನಂಪ್ರತಿ 9 ದಶಲಕ್ಷ ಲೀಟರ್‌ಗಳಷ್ಟು ನೀರನ್ನು ಸುಮಾರು ಒಂದು ವರ್ಷಗಳವರೆಗೆ ತಲಾವಾರು ದಿನಂಪ್ರತಿ 75 ಲೀಟರ್‌ನಂತೆ ಹಾಲಿ ಜನಸಂಖ್ಯೆ 1,50,000 ಜನಗಳಿಗೆ ನೀರು ಸರಬರಾಜು ಮಾಡಬಹುದಾಗಿರುತ್ತದೆ. ಇದರ ಜೊತೆಯಲ್ಲಿ 100 ವಿದ್ಯುತ್ ಪಂಪುಗಳನ್ನು ಅಳವಡಿಸಿರುವ ಕೊಳವೆ ಬಾವಿಗಳ ನೀರನ್ನು ಸಹ ಸರಬರಾಜು ಮಾಡಲಾಗುತ್ತಿತ್ತು.

ಕಳೆದ ಮೂರು ವರ್ಷಗಳ ಪ್ರಕೃತಿಯ ವಿಕೋಪದಿಂದ ಮಳೆಯ ಅಭಾವ ಉಂಟಾಗಿ ಬೇತಮಂಗಲ ಕೆರೆಯು ಸೆಪ್ಟೆಂಬರ್ 2003 ರಿಂದ ಬತ್ತಿ ಹೋಗಿರುತ್ತದೆ. ಅಂದಿನಿಂದಲೂ ಕೇವಲ ಕೊಳವೆ ಬಾವಿಗಳ ನೀರಿನಿಂದಲೇ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕಳೆದ ಮಾರ್ಚ್ ತಿಂಗಳಿನಿಂದ ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಕಡಿಮೆಯಾಗಿದ್ದು ಸುಮಾರು 600 ರಿಂದ 700 ಅಡಿ ಆಳದಲ್ಲಿಯೂ ಸಹ ನೀರಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿದೆ.

ಈ ತೀವ್ರ ನೀರಿನ ಬವಣೆಯನ್ನು ನೀಗಿಸಲು ಜಿಲ್ಲಾ ಆಡಳಿತದ ವತಿಯಿಂದ 17 ಟ್ರ್ಯಾಕ್ಟರ್ ಚಾಲಿತ ಟ್ಯಾಂಕರ್‌ಗಳ ಮೂಲಕ ಪ್ರತಿದಿನ ಕೆ.ಜಿ.ಎಫ್. ಹಾಗೂ ಬಿಜಿಎಂಎಲ್ ಪ್ರದೇಶಗಳಿಗೆ ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯ ಜೊತೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಇದರ ಜೊತೆಗೆ ಬೇಸಿಗೆ ಸಮಯದಲ್ಲಿ ಹೊಸಪೇಟೆಯಿಂದ ತುಂಗಭದ್ರಾ ನದಿ ನೀರನ್ನು ರೈಲ್ವೆ ಟ್ಯಾಂಕರ್‌ಗಳ ಮೂಲಕ ಮೇ. 15 2004 ರಿಂದ ಜೂನ್ 15 2004 ರವರೆಗೆ ಒಟ್ಟು 123 ರೈಲ್ವೆ ಟ್ಯಾಂಕರ್‌ಗಳಲ್ಲಿ 26.65 ಲಕ್ಷ ಲೀಟರ್‌ಗಳನ್ನು ರೂ. 2.6 ಲಕ್ಷಗಳ ಖರ್ಚಿನಲ್ಲಿ ಸರಬರಾಜು ಮಾಡಲಾಗಿದೆ. ಈ ರೀತಿ ಸರಬರಾಜು ಆದ ನೀರನ್ನು ಸು॥66,500 ಜನಸಂಖ್ಯೆಗೆ ಮೇಲಿನ ಅವಧಿಯಲ್ಲಿ ವಿತರಿಸಲಾಗಿದೆ.

2003–04 ನೇ ಸಾಲಿನ ಅಭಾವ ಪರಿಹಾರ ಕಾಮಗಾರಿಯಡಿಯಲ್ಲಿ ರೂ. 43.00 ಲಕ್ಷಗಳ ಬಿಡುಗಡೆಯಾಗಿದ್ದು ಈ ಅನುದಾನದಿಂದ 27 ಕೊಳವೆ ಬಾವಿಗಳನ್ನು ಕೊರೆದು 21 ಸಂಖ್ಯೆ ಹಾಲಿ ಇದ್ದ ಕೊಳವೆ ಬಾವಿಗಳನ್ನು ಆಳಗೊಳಿಸಲಾಗಿದೆ. ಹಾಗೂ 12 ವಿದ್ಯುತ್ ಪಂಪುಗಳನ್ನು ಕೊಳವೆ ಬಾವಿಗಳಿಗೆ ಅಳವಡಿಸಲಾಗಿದೆ. ಹಾಗೂ 12 ವಿದ್ಯುತ್ ಪಂಪುಗಳನ್ನು ಕೊಳವೆ ಬಾವಿಗಳಿಗೆ ಅಳವಡಿಸಲಾಗಿದೆ. 2004–05 ನೇ ಸಾಲಿನಲ್ಲಿ ಇಲ್ಲಿಯವರೆಗೆ 12.00 ಲಕ್ಷ ರೂ.ಗಳನ್ನು ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಬಿಡುಗಡೆ ಮಾಡಲಾಗಿದ್ದು ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಉಪಯೋಗಿಸಿಕೊಳ್ಳಲಾಗುತ್ತಿದೆ.

ಕೆ.ಜಿ.ಎಫ್. ನೀರು ಸರಬರಾಜು ವ್ಯವಸ್ಥೆಯನ್ನು ಮಂಡಳಿಯ ನಿರ್ವಾಹಕ ನಿರ್ದೇಶಕರು ಪರಿವೀಕ್ಷಣೆ ಮಾಡಿ ತುರ್ತು ಪರಿಹಾರಕ್ಕಾಗಿ ರೂ. 15.85 ಲಕ್ಷಗಳ

ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಅನುಮೋದನೆಗಾಗಿ ಹಾಗೂ ಅನುದಾನ ಬಿಡುಗಡೆಯಾಗಿ ಕೋರಿ ಸಲ್ಲಿಸಲಾಗಿದೆ. ಅನುಮೋದನೆಯ ನಿರೀಕ್ಷೆಯ ಮೇರೆಗೆ ಈಗಾಗಲೇ 3 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು 1 ಕೊಳವೆ ಬಾವಿಯನ್ನು ಆಳ ಮಾಡಲಾಗಿದೆ. ಉಳಿದ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದೆ. ಹಾಲಿ ನೀರು ಸರಬರಾಜನ್ನು ವಿವಿಧ ವಾರ್ಡ್‌ಗಳಿಗೆ ವಾರಕ್ಕೊಮ್ಮೆಯಂತೆ ನೀರು ಸರಬರಾಜು ಮಾಡಲಾಗುತ್ತಿದೆ.

ಕೆ.ಜಿ.ಎಫ್. ನಗರಕ್ಕೆ ಒಳಚರಂಡಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ

ಈ ಬಗ್ಗೆ ಸಮೀಕ್ಷೆಯನ್ನು ನಡೆಸಿ ಯೋಜನಾ ಸಾಧ್ಯತಾ ವರದಿಯನ್ನು ತಯಾರಿಸಲಾಗಿದ್ದು ಅಂದಾಜು ಮೊತ್ತವು 1999–2000 ರ ಸಾಲಿನ ದರಪಟ್ಟಿಯ ಆಧಾರದ ಮೇಲೆ ರೂ. 15.68 ಕೋಟಿಗಳ ಅವಶ್ಯಕತೆ ಇರುತ್ತದೆ. ಈಗಿನ ದರಗಳಲ್ಲಿ ಸುಮಾರು 18.80 ಕೋಟಿಗಳು ಆಗಲಿದ್ದು, ಈ ಮೊತ್ತದ ಶೇ.30 ರಷ್ಟನ್ನು ಸ್ಥಳೀಯ ಸಂಸ್ಥೆ ನೀಡಬೇಕಾಗಿದ್ದು, ಅದನ್ನು ನೀಡಿದ ಕೂಡಲೇ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

† **ಶ್ರೀ ಎಸ್. ರಾಜೇಂದ್ರನ್(ಕೆ.ಜಿ.ಎಫ್) :** ಮಾನ್ಯ ಅಧ್ಯಕ್ಷರೇ, ಕೆ.ಜಿ.ಎಫ್.ನಲ್ಲಿನ ಡ್ರಿಂಕಿಂಗ್ ವಾಟರ್ ಬಗ್ಗೆ ಸರ್ಕಾರದವರು ಏನು ರಿಪೋರ್ಟ್ ಕೊಡುತ್ತಾರೋ, it may be 10% correct, remaining 90% it is not at all correct. ಸುಮಾರು ನಾಲ್ಕೂವರೆ ವರ್ಷ, the entire BGML i.e. Bharath Gold Mines Limited was running well. At that time ಅವರು ಆ ಕ್ಷೇತ್ರಕ್ಕೆ, ಬಿಜಿಎಂಎಲ್ ಏರಿಯಾಕ್ಕೆ drinking water plus normal water, they have been supplying from the underground. ಈಗ ಅದನ್ನು ಮುಚ್ಚಿ ಸುಮಾರು ನಾಲ್ಕೂವರೆ ವರ್ಷವಾಗಿದೆ. ಈಗ ಅಲ್ಲಿ ಕುಡಿಯುವ ನೀರು ಸಿಗುವುದು ಸಾಧ್ಯವೇ ಇಲ್ಲ. ಅದರ ಜೊತೆಗೆ 1904ರಲ್ಲಿ ಬೇತಮಂಗಲ ಕೆರೆಯನ್ನು ಒಂದು ಕೆ.ಜಿ.ಎಫ್. ಸಿಟಿಗೋಸ್ಕರ ಸರ್ಕಾರದವರೇ ಕೊಟ್ಟಿದ್ದಾರೆ. ಅವತ್ತಿನಿಂದ ಇವತ್ತಿನವರೆಗೂ ಅದಕ್ಕೆ de-silting ಅನ್ನೇ ಮಾಡಿಲ್ಲ. ಸರ್ಕಾದವರ ಗಮನಕ್ಕೆ ಇದು ಏತಕ್ಕೆ ಬಂದಿಲ್ಲ? ನಾವು ಪತ್ರಿಕೆಗೆ ಹೇಳಿಕೆ ಕೊಡುವ ಟೈಮ್‌ನಲ್ಲಿ ಇಷ್ಟು ಕೋಟಿ ರೂ. ಹಣಕ್ಕೆ de-silting ಎಂದು ಹೇಳುತ್ತೇವೆ. ಆದರೆ ಪರಿಸ್ಥಿತಿ ಏನಾಗಿದೆ? Regarding the KGF city, it has become the dying city ಅದನ್ನು ಬಿಟ್ಟರೆ ನಮ್ಮ ಊರಿನಲ್ಲಿ ಬೇರೆ ಗತಿಯೇ ಇಲ್ಲ. ಅಕ್ಕಪಕ್ಕದಲ್ಲಿ ಕೆರೆಗಳೇ ಇಲ್ಲ. So, ಅದಕ್ಕೆ 10 ಕೋಟಿ ರೂ. ಖರ್ಚು ಮಾಡಿದರೆ ಬಹಳ ಅನುಕೂಲ ಆಗುತ್ತದೆ. This is a right time to spend atleast Rs. 10 Crores, ಅದರ ಜೊತೆಗೆ Bharath Earth Mover's Limited, the No,1 Asian Company, which manufactures the bulldozers ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ನಾವು bu®ldozers ಎಲ್ಲ ಕೊಡುತ್ತೇವೆ, ಡೀಸೆಲ್ ಖರ್ಚು ಮಾತ್ರ ತಾವು ಕೊಡಿ ನಾವು de-silting ಮಾಡುತ್ತೇವೆಂದು ಪತ್ರ ಬರೆದರು. The Government has not given any attention to the KGF city. ಅದು

ಏನು ಕಾರಣ ನನಗೇ ಗೊತ್ತಿಲ್ಲ. ಅವರಿಗೆ ಏನೆಂದರೆ ಅದು ಕೇಂದ್ರಸರ್ಕಾರದ್ದು ಅವರೇ ಮಾಡಲಿ ಎನ್ನುವ ಅಭಿಪ್ರಾಯ. ಇರಲಿ, ಆದರೆ ಅದು ನಮ್ಮ ರಾಜ್ಯದಲ್ಲಿದೆ. ನೀವು ಇದಕ್ಕೆ ಏತಕ್ಕೆ importance ಕೊಟ್ಟಿಲ್ಲ ಎಂದು ಕೇಳಿದರೆ ಅದು ನಾವು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಅಲ್ಲಿರುವ ಜನ ಶಾಸಕನಾಗಿ ನನಗೂ ಓಟು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರಕ್ಕೆ ಹೋಗುವ ಎಂ.ಪಿ.ಗೂ ಓಟು ಕೊಟ್ಟಿದ್ದಾರೆ. ನಗರದ ಕೌನ್ಸಿಲರ್‌ಗೂ ಸಹ ಓಟು ಕೊಟ್ಟಿದ್ದಾರೆ. ಆ ಮುನ್ಸಿಪಾಲಿಟಿಯವರು ಅದರ ಬಗ್ಗೆ ಗಮನವನ್ನೇ ಹರಿಸುವುದಿಲ್ಲ. The Government is also not taking attention for this BGML area. There are about 16,000 houses, In the BGML area, the population is around 80,000-1,00,000 ಅವರಿಗೆ toilet ವ್ಯವಸ್ಥೆ ಇಲ್ಲ. ಅಲ್ಲಿಗೆ City Muncipalities status ಇದೆ Town Muncipalities ಗೆ ಎಲ್ಲಾ drainage system underground ನಲ್ಲಿ ಇದೆ. ಆದರೆ ಇದು City Muncipality ಆಗಿ ಸ್ವತಂತ್ರ ಬಂದು ಸುಮಾರು 50 ವರ್ಷ ಆಗಿದ್ದರೂ ಕೂಡ ಇವತ್ತಿಗೂ there is no drainage system in that city ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಪ್ರಶ್ನೆ ಕೇಳಿದರೆ ಆದಷ್ಟು ಬೇಗ ನಾವು ಮಾಡುತ್ತೇವೆ ಎನ್ನುವ ಉತ್ತರ ಕೊಡುತ್ತಾರೆ. Last time when I was elected as a M.L.A. I brought to the notice of this Government ಅವತ್ತಿನಿಂದ ಇವತ್ತಿನವರೆಗೆ 'ಆದಷ್ಟು ಬೇಗನೆ' ಎನ್ನುವ ಉತ್ತರ ಕೊಡುತ್ತಲೇ ಇದ್ದಾರೆ. ನನ್ನ ಕೂದಲು ಬಿದ್ದುಹೋದರೂ 'ಆದಷ್ಟು ಬೇಗನೆ! ' ಹೀಗೆ ಹೇಳಿದರೆ ನಾನು ಏನು ಮಾಡುವುದಕ್ಕಾಗುತ್ತದೆ? I am happy my respectful Hon'ble Minister P.G.R. Sindhia is well aware of the conditions prevailing in my K.G.F. ನನ್ನ ಕ್ಷೇತ್ರದ ಜನರಿಗೆ ಊಟದ ವ್ಯವಸ್ಥೆ ಇಲ್ಲ ಅಲ್ಲಿ ಕುಡಿಯುವ ನೀರು ಇಲ್ಲ, ಆ ಸಿಟಿ ಬಗ್ಗೆ ಸರ್ಕಾರದವರು ಏನೂ ಚಿಂತನೆಯನ್ನು ಮಾಡಿಲ್ಲ. ಪಾರ್ಲಿಮೆಂಟ್‌ನಲ್ಲಿ ಅದರ ಬಗ್ಗೆ raise ಮಾಡಿಲ್ಲ. At least this is an opportunity for me to bring to your notice about the problem of my citizens of this KGF city. ಅವರಿಗೆ toilet ವ್ಯವಸ್ಥೆಯೇ ಇಲ್ಲ. ನಾಲ್ಕೂವರೆ ವರ್ಷದಿಂದ ಹೇಳುತ್ತಿದ್ದೇನೆ. the entire drainage system, drinking water, toilet facility was developed by the BGML, and not by the Karnataka Government, ಒಂದು ಕೋಟಿ ರೂ. ಅಥವಾ ಹತ್ತು ಲಕ್ಷ ರೂ. ಕೊಟ್ಟರೆ ಬರೀ non-mining area ಎನ್ನುವುದು ಒಂದು ಇದೆ. ಅದಕ್ಕೆ ಮಾತ್ರ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ I am brining to the attention of the government that there was a very serious lapse on the part of the Government ಮಾನ್ಯ ಮುಖ್ಯಮಂತ್ರಿಯವರು ಅಲ್ಲಿಗೆ ಭೇಟಿ ಮಾಡಿ ಕುಡಿಯುವ ನೀರಿಗೋಸ್ಕರ ಟ್ಯಾಂಕ್ ಕೊಟ್ಟರು. ಪೂರ್ತಿ ಕೆ.ಜಿ.ಎಫ್. ಸಿಟಿಯ ಜನರಿಗೆ ನೀರನ್ನು equal distribution ಮಾಡಿ ಕೊಡೋಣ ಎಂದು ಮಾಡಿದರೆ, police department and water department joined

together and ಅದಕ್ಕೆ ಬಣ್ಣ ಹಾಕಿ ಯಾವ ಪಕ್ಷ, ಅದಕ್ಕೆ ಬೊಂಬೆಗಳು.... This creates law and order in the KGF city. ಕುಡಿಯುವ ನೀರಿನ ಹಂಚಿಕೆಯನ್ನು ಹೇಗೆ ಮಾಡಬೇಕೆಂದರೆ, they should openly handed over to the water Board people, I requested the Managing Director of the Water Board to depute a person and I said that I will pay Rs, 1,000 salary minimum from my salary, Let them just make an attendence, distribute the water, wherever there is scarcity and necessity. ಅದರ ಮೇಲೆ Water Board ನವರು ಏನು ಹೇಳುತ್ತಾರೆಂದರೆ, 'ನಾವು ಏನು ಮಾಡುವುದಕ್ಕಾಗುತ್ತದೆ ಸರ್, ನಮ್ಮ Deputy Commissioner ರವರು ಹೇಳಿದರು. ಅದಕ್ಕೆ ಟ್ಯಾಂಕ್‌ಗಳನ್ನು ಹಾಕಬೇಕು, ಬೊಂಬುಗಳನ್ನು ಹಾಕಬೇಕು, ಎಂ.ಪಿ. ಫಂಡ್ ಇರಬೇಕು, ಕಲರ್ ಕೊಡಬೇಕು, ಅವತ್ತಿನಿಂದ ಕುಡಿಯುವ ನೀರು ಹೋಗಬೇಕೆಂದರೆ, what politics is happening in this water problem? You just see. petty problems, ಇದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬರುವ ಸ್ಥಿತಿಯಲ್ಲಿ ನಾನಿದ್ದೇನೆ, ಆದ್ದರಿಂದ ಅಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟವಾಗಿದೆ. ನಮ್ಮ ಮುಖ್ಯಮಂತ್ರಿಗಳು Managing Director of water Board ನವರನ್ನು ಕರೆದು ಹೇಳಿದರು, ಆದಷ್ಟು ಬೇಗ You just go and do the needful ಎಂದು, ಮೂರು ಬೋರ್‌ವೆಲ್ ಹಾಕಿ ಒಂದು ತಿಂಗಳು ಆಗಿದೆ, ಅದಕ್ಕೆ ಏತಕ್ಕೆ pipes. ಹಾಕಿಲ್ಲ ಎಂದು ಕೇಳಿದರೆ, ನೋಡೋಣ ಸರ್, ಇನ್ನೂ ಸಾಮಾನು ಬಂದಿಲ್ಲ ಎಂದು ಹೇಳುತ್ತಾರೆ ಏತಕ್ಕೆ ಕನೆಕ್ಷನ್ ಕೊಟ್ಟಿಲ್ಲ ಎಂದು ಕೇಳಿದರೆ ಇನ್ನೂ ಮೋಟಾರ್ ಬಂದಿಲ್ಲ ಸಾರ್, ಎಂದು ಹೇಳುತ್ತಾರೆ. Just three borewells they dig so for and two re-bore wells they made. How can they just solve the water problem? There are no other source at all for the KGF city. Poisonous water is there in the BGML. we cannot just utilize it for washing purpose. Why the Government has not given more importance to my city? why they are neglecting? Drainage system ನಮ್ಮ ಊರಿನಲ್ಲಿ ಇಲ್ಲ. 8 ಅಡಿ ಪಕ್ಕ ಪಕ್ಕದಲ್ಲಿ ಮನೆಗಳ್ಳು ಇದ್ದು ಅವರಿಗೆ drainage ಇಲ್ಲ. ಆ Ladies toilet ಗೆ ಎಲ್ಲಿಗೆ ಹೋಗುವುದು? Where is the drainage system? ಕಾಲರಾ ಬಂದ ಮೇಲೆ ಸರ್ಕಾರದವರು D.C. ಗೆ Information ಕೊಟ್ಟಮೇಲೆ ಕಲರಾ medicine ತೆಗೆದುಕೊಂಡು ಬಂದು ಕೊಟ್ಟರು. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ನಮ್ಮ ಕೆ.ಜಿ.ಎಫ್. ಜನರನ್ನು ಉಳಿಸುವುದಕ್ಕೆ ಸಾಧ್ಯವೇ ಇಲ್ಲ.

Sri. J.C. MADHUSWAMY : Ladies ಮಾತ್ರ toilet ಗೆ ಹೋಗುತ್ತಾರಾ ಅಥವಾ Gents ಸಹ ಹೋಗುತ್ತಾರಾ?

Sri. S. RAJENDRAN : Gents toilet ಗೆ ಹೋಗಬೇಕಾದರೆ ಎಲ್ಲಿಯಾದರೂ plant remove ಮಾಡಿ ಕುಳಿತುಕೊಳ್ಳಬಹುದು ಆ ರೀತಿ Ladies

ಹೋಗುವುದಕ್ಕೆ ಆಗುತ್ತದೆಯೇ? ಇದು ಹೇಳುವುದಕ್ಕೆ ತಮಾಷೆಯಾಗಿ ಕಾಣುತ್ತದೆ. But my ladies are crying everyday, I am unable to just walk on the floor of their houses ಸರ್, toilet ಗೆ ಎಲ್ಲಿಗೆ ಹೋಗುವುದೆಂದು ಗೊತ್ತಾಗುತ್ತಿಲ್ಲ ಎಂದು ಕೇಳುತ್ತಾರೆ. ನಾಲ್ಕೂವರೆ ವರ್ಷದಿಂದ toilet clean ಮಾಡಿಲ್ಲ ಎಂದರೆ there is no drainage system, it is all constructed toilet, ಕುಡಿಯುವುದಕ್ಕೆ ನೀರು ಇಲ್ಲವೆಂದ ಮೇಲೆ toilet ಗೆ ನೀರು ಎಲ್ಲಿಂದ ಸಿಗುತ್ತದೆ? See, this was the one fine city, which was giving the highest royalty to this country, not only to this state, but to the country. ಅಂತಹ ಸಿಟಿ today is destroying, day by day it is coming down, my people has been suppressed, opperessed and now they are depressed. ನಾಲ್ಕೂವರೆ ವರ್ಷ ಊಟಕ್ಕೆ ವ್ಯವಸ್ಥೆ ಇಲ್ಲ, not only for the drinking water, ನಮ್ಮ ಲೀಡರ್‌ಗಳೆಲ್ಲ 'ಕೂಲಿಗಾಗಿ ಕಾಳು, ಕೂಲಿಗಾಗಿ ಕಾಳು' ಎಂದು food grains ಬಗ್ಗೆ ಮಾತನಾಡುತ್ತಾರೆ. ಅವರಿಗೆ atleast ಊಟಕ್ಕೆ ವ್ಯವಸ್ಥೆ ಮಾಡಿ ಸರ್ಕಾರ ಕೊಟ್ಟಿದ್ದರೆ ಸಾಕಾಗುತ್ತಿತ್ತು. ಕೇಂದ್ರ ಸರ್ಕಾರದ ಕಂಪನಿ ಅದು ಆಗಿರಲಿ. But ಅಲ್ಲಿ ನಮ್ಮ ಜನ ಇಲ್ಲವೇ? ಅವರು ರಾಜ್ಯಸರ್ಕಾರ ಜನರಲ್ಲವೇ? Is it not our Karnataka people? see, what a shame on the part of the Government for just keeping mum so long, Therefore, ಅವರು ಒಂದು ಸಮಿತಿ ಮಾಡಿ ಆ ಊರಿಗೆ importance ಕೊಟ್ಟು ಡೆಲ್ಲಿ ಸರ್ಕಾರದಲ್ಲಿ ಕಳೆದ ನಾಲ್ಕೂವರೆ ವರ್ಷದ ಹಿಂದೆ judgement ಆಗಿಯೂ ಅವರಿಗೆ ಹಣ ಕೊಟ್ಟಿಲ್ಲ. My respectful Minister definitely should take interest, They should have faith and belief and courtesy of that Schedule Caste and Schedule Tribe people. Majority or 90% people in that area are living without water. ನಾವು ಮಾತನಾಡಿದರೆ ಏನೋ High-Tech politics, high technology, social economic development, ಆದರೆ ಸರ್ಕಾರ ಕುಡಿಯುವ ನೀರನ್ನೇ ಕೊಟ್ಟಿಲ್ಲ! ಹೇಗಿದೆ ವ್ಯವಸ್ಥೆ ನೋಡಿ. ಇನ್ನೂ ಕೂಡ ಕುಡಿಯುವ ನೀರನ್ನೇ ಕೊಟ್ಟಿಲ್ಲ. ನಾವೂ ಇನ್ನೂ ಕೂಡ ancient ಕಾಲದಲ್ಲಿಯೇ ಇದ್ದೇವೆ. ಹಳೆಯ ಕಾಲದ ದ್ರಾವಿಡರ ಕಾಲದಲ್ಲಿಯೇ ನಮ್ಮ ಸಿಟಿ ಇದೆ. ಅವರು ಮಾತುಗಳು ಏನೆಂದರೆ high society status, city municipality status, ಅಲ್ಲಿಯ ನಮ್ಮ City Muncipality Commissioner ಗೆ ಒಂದು ಕಾರು, President ಗೆ ಒಂದು ಕಾರು, Red light ಒಂದು ಕೊಟ್ಟಿಲ್ಲ, ಅದನ್ನು ಕೊಟ್ಟರೆ K.G.F city is the No.1 ಎಂದು ಹೇಳಿಬಿಡುತ್ತಾರೆ. But ಅಲ್ಲಿನ ವ್ಯವಸ್ಥೆ ನೋಡಿದರೆ ಜನ ಅವರ ಮುಖ ನೋಡುವುದಕ್ಕೆ ನನಗೆ ನಾಚಿಕೆ ಆಗುತ್ತದೆ.

ಅಧ್ಯಕ್ಷರು : ಶ್ರೀ ರಾಜೇಂದ್ರನ್‌ರವರೆ, ತಾವು clarification ಕೇಳಿ, ಈ ತರಹ ಭಾಷಣ ಮಾಡಿದರೆ ಹೇಗೆ?

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, clarification ಕೇಳುವುದಕ್ಕೆ ನಮ್ಮ ಮಾನ್ಯ ಸಚಿವರಾದ ಸಿಂಧ್ಯಾರವರಿಗೆ ನಮ್ಮ ಕೆ.ಜಿ.ಎಫ್. ಬಗ್ಗೆ ಪೂರ್ತಿ ಗೊತ್ತಿದೆ. ಅವರು ಮಂತ್ರಿಯಾಗಿದ್ದಂಥ ಕಾಲದಲ್ಲಿಯೇ ನಮ್ಮಲ್ಲಿ ಸ್ವತಂತ್ರ ಬಂದು 50 ವರ್ಷವಾದರೂ ಬಸ್‌ಸ್ಟಾಂಡ್ ಇಲ್ಲ ಎಂದು ಕೇಳಿದಾಗ ಅವರೇ ಮಾಡಿಕೊಟ್ಟಿದ್ದು. ಅವರಿಗೆ ಎಲ್ಲಾ ಗೊತ್ತಿದೆ. ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಬಸ್‌ಗೆ ಬಾಡಿ ಬಿಲ್ಡಿಂಗ್ ಅನ್ನು ಮಾಡಲು ನಮ್ಮಲ್ಲಿಗೆ ಕೊಟ್ಟರು. Home Minister ಅವರು ಆಗಿದ್ದಾಗ ಅಲ್ಲಿರುವ ಕಳ್ಳರು, ಅಧಿಕಾರಿಗಳನ್ನೆಲ್ಲಾ remove ಮಾಡಿದರು. He knows everything better than me ಎನ್ನುವ ಸ್ಥಿತಿ ಇದೆ. ಅದಕ್ಕೆ I am bringing to his notice. Let my Hon'ble Minister give fruitful result to my KGF city which is in pathetic condition.Kindly just give me a good result for us and I hope, a good message will reach to my KGF city ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ ಸ್ವಾಮಿ.

† **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** : ಮಾನ್ಯ ಅಧ್ಯಕ್ಷರೆ, ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ರಾಜೇಂದ್ರನ್ ಹೇಳಿದ ಪ್ರಕಾರ ಶೌಚಾಲಯ ಇಲ್ಲ, ಒಳಚರಂಡಿ ವ್ಯವಸ್ಥೆ ಇಲ್ಲ, ಇದೆಲ್ಲವನ್ನು ಅವರು ಹೇಳಿದ್ದಾರೆ, ಇದರ ಜೊತೆಗೆ ಅಲ್ಲಿ ಸರ್ಕಾರದ ಕಡೆಯಿಂದ ನಾವು ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದೇವೆ, ಕುಡಿಯುವ ನೀರನ್ನು ಮೋಟಾರು ವಾಹನದಲ್ಲಿ ಟ್ಯಾಂಕುಗಳನ್ನು ಕಟ್ಟಿಕೊಂಡು ಸರಬರಾಜು ಮಾಡುತ್ತಿದ್ದೇವೆ, ಆದರೆ ಆ ಟ್ಯಾಂಕ್‌ನ ಮೇಲೆ ತಮಿಳು ಭಾಷೆಯಲ್ಲಿ ಬರೆದಿದ್ದಾರೆ ಮತ್ತು ಅದರಲ್ಲಿ ಅಲ್ಲಿಯ ಪಾರ್ಲಿಮೆಂಟ್ ಸದಸ್ಯರ ಫೋಟೋ ಇದೆ. ಇದೇನು ಹೀಗೆ ಎನ್ನುವುದು ನನಗೆ ಅರ್ಥವಾಗಲಿಲ್ಲ. ಕೋಲಾರದ ಚಿನ್ನದ ಗಣಿ ಪ್ರದೇಶವನ್ನು ಕರ್ನಾಟಕ ಸರ್ಕಾರ ಏನಾದರೂ ತಮಿಳುನಾಡಿಗೆ ಬಿಟ್ಟುಬಿಟ್ಟಿದ್ದಾರೆಯೇ ಅಥವಾ ಆ ಜಿಲ್ಲೆಯನ್ನು ಮರೆತುಬಿಟ್ಟಿದ್ದಾರಯೇ? ಯಾವ ಉದ್ದೇಶ ಎನ್ನುವುದು ನನಗೆ ಅರ್ಥವಾಗಲಿಲ್ಲ. ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ, ಅಲ್ಲಿ ಬಡವರು ಜನಸಾಮಾನ್ಯರು ಇರತಕ್ಕಂಥ ಪ್ರದೇಶವನ್ನು ಸಮಗ್ರವಾಗಿ ಆ ಜನತೆಗೆ ಆಗಬೇಕಾಗಿರುವಂಥ ಮೂಲಭೂತ ಕೆಲಸ ಆಗಲೇಬೇಕು. ಆ ಜನಗಳಿಗೆ ಅನುಕೂಲ ಮಾಡಿಕೊಡಬೇಕು. ಒಳಚರಂಡಿ ವ್ಯವಸ್ಥೆ ಆಗಬೇಕು, ಶೌಚಾಲಯ ಆಗಬೇಕು ಮತ್ತು ಆಹಾರಪದಾರ್ಥಗಳನ್ನು ಕೊಡಬೇಕು. ಅದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಅದರ ಜೊತೆಗೆ ಕನ್ನಡ ಪ್ರದೇಶವೆಂದು ಇನ್ನೂ ಕೂಡ ಅವರ ಬಗ್ಗೆ ಸರ್ಕಾರ ಗಮನವನ್ನೇ ಹರಿಸಿಲ್ಲ. ಆ ಪ್ರದೇಶವನ್ನು ಸಮಗ್ರವಾಗಿ ಕನ್ನಡ ಪ್ರದೇಶ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅದು ಗಡಿನಾಡು ಪ್ರದೇಶವಾಗಿದೆ. ಕನ್ನಡದ ಬಗ್ಗೆ ಈ ಸರ್ಕಾರ ಉದ್ದಉದ್ದವಾಗಿ ಮಾತನಾಡುತ್ತಾರೆ. ಅಲ್ಲಿ ನೀರು ಹಂಚತಕ್ಕ ಟ್ಯಾಂಕ್‌ನ ಮೇಲೆ ತಮಿಳು ಭಾಷೆಯಲ್ಲಿ ಬರೆದಿರುವುದು ಮತ್ತು ಪಾರ್ಲಿಮೆಂಟ್ ಸದಸ್ಯರ ಫೋಟೋ ಅದರ ಮೇಲಿರುವ ಚಿತ್ರ ಇರುವಂಥ ಫೋಟೋ ನನ್ನ ಹತ್ತಿರ ಇದೆ ಅದನ್ನು ತಮಗೆ ಕಳುಹಿಸುತ್ತಿದ್ದೇನೆ, ಅಲ್ಲಿ ನೀರು

ಹಂಚಿತಕ್ಕಂಥ ವಾಹನದಲ್ಲಿ ತಮಿಳಿನಲ್ಲಿ ಬರೆದಿದ್ದಾರೆ, ಅದು ಕನ್ನಡ ಪ್ರದೇಶ, ತಮಿಳಿನಲ್ಲಿ ಏಕೆ ಬರೆದರು? ಇದಕ್ಕೆ ಕಾರಣವೇನು? ಇದು ಕರ್ನಾಟಕ ರಾಜ್ಯವೇ? ಇವರಿಗೆ ತಲೆ ಇದೆಯೇ? ಬುದ್ಧಿ ಇದೆಯಾ? ಮರ್ಯಾದೆ ಇದೆಯೇ? ಗೌರವ ಇದೆಯೇ ಎಂದು ನಾನು ಇವತ್ತು ಸರ್ಕಾರವನ್ನು ಕೇಳುತ್ತೇನೆ.

ಅಧ್ಯಕ್ಷರು : ವಿಷಯಾಂತರ ಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಈ ಜಿಲ್ಲೆ ಯಾರ ಕೈಯಲ್ಲಿ ಇದೆ? ಕೋಲಾರದ ಚಿನ್ನದ ಗಣಿ ಏನಾದರೂ ತಮಿಳುನಾಡಿನಲ್ಲಿ ಇದೆಯೇ? ಇವರಿಗೇನು ಗೌರವವಿದೆಯೇ? ಯಾರು ಇಲ್ಲಿ ಬರಿ ಎಂದು ಇವರಿಗೆ ಹೇಳಿದ್ದು? ಜಿಲ್ಲಾಧಿಕಾರಿ ಏನು ಮಾಡುತ್ತಿದ್ದಾರೆ?

5.20 ಪಿಎಂ

ಕೋಲಾರದ ಚಿನ್ನದ ಗಣಿಯನ್ನು ನಾವು ಹೊರಗಡೆ ಮಾಡಿದ್ದೇವೆಯೇ? ಇದೇ ರೀತಿ, ನಮ್ಮ ಸರ್ಕಾರದ ಪಾಲಿಸಿ ಏನಾಗಿದೆ? ಇಡೀ ಗಡಿ ನಾಡು ಪ್ರದೇಶದಲ್ಲಿ ಬೆಳಗಾವಿ ಎಂದರೆ ಮಾರಾಠಿ, ಇನ್ನೊಂದು ಊರು ಎಂದರೆ, ಇನ್ನೊಂದು ಊರು ಈ ತರಹ ನಮ್ಮಲ್ಲಿ, ಪ್ರಾಮಾಣಿಕವಾಗಿ ಕನ್ನಡದ ಬೆಳವಣಿಗೆ ಬಗ್ಗೆ ಇವರಿಗೆ ಸ್ವಲ್ಪವೂ ಕಾಳಜಿ ಇಲ್ಲ, ಇದು ನಿಜಕ್ಕೂ ಅಕ್ಷಮ್ಯ ಅಪರಾಧ. ಇದನ್ನು ಯಾರು ಮಾಡಿದ್ದಾರೆ? ಈ ಬಗ್ಗೆ ತೀವ್ರವಾದ ಕ್ರಮವನ್ನು ಕೈಗೊಳ್ಳಬೇಕು. ಯಾರೇ ಅಧಿಕಾರಿ ಇರಲಿ, ಅವರನ್ನು ವಜಾ ಮಾಡಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಬಂದಿದ್ದಾರೆ. ಕೋಲಾರ ಚಿನ್ನದ ಗಣಿಯಲ್ಲಿ ನೀರು ಹಂಚುವ ವಾಹನದ ಮೇಲೆ ತಮಿಳಿನಲ್ಲಿ ಬರೆದಿದ್ದಾರೆ. ಇದು ಕರ್ನಾಟಕ. ಕನ್ನಡ ಪ್ರದೇಶ. ಇಲ್ಲಿ ಕನ್ನಡದಲ್ಲಿ ಬರೆಯುವುದು ಬಿಟ್ಟು, ತಮಿಳಿನಲ್ಲಿ ಬರೆದರೆ, ಇದು ಕರ್ನಾಟಕ ಸರ್ಕಾರದ ಹೊಣೆಗೇಡಿತನ, ಇದು ಎಷ್ಟು ಅಪಾಯಕಾರಿ ಬೆಳವಣಿಗೆ? ನಾವು ಕೋಲಾರ ಚಿನ್ನದ ಗಣಿಯನ್ನು ತಮಿಳುನಾಡಿಗೆ ಕೊಟ್ಟಿದ್ದೇವೆಯೇ? ಇದು ನನಗೆ ಅರ್ಥವಾಗುತ್ತಿಲ್ಲ. ಅದನ್ನು ಯಾವತ್ತೂ ಕೊಡುವುದಕ್ಕೆ ಸಾಧ್ಯವೂ ಇಲ್ಲ.

ಶ್ರೀ ಎಸ್. ರಾಜೇಂದ್ರನ್ : ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಕನ್ನಡದ ಗಂಡು ಮೆಟ್ಟಿದ ಭೂಮಿ. ಅಲ್ಲಿ ಕನ್ನಡವನ್ನು ಬೆಳೆಸಬೇಕು. ಕನ್ನಡವನ್ನು ಉಳಿಸಬೇಕು. ಆದರೆ, ಸರ್ಕಾರದ ನೀತಿಯಿಂದ, ಖಂಡಿತವಾಗಿ ಇವರಿಗೆ ಕನ್ನಡ ಬೆಳೆಸುವುದಕ್ಕೆ ಯೋಗ್ಯತೆ ಇಲ್ಲ. ತಮಗೆ ಎರಡು ಚಿತ್ರಗಳನ್ನು ಕಳುಹಿಸುತ್ತಿದ್ದೇನೆ, ಒಂದು ಚಿತ್ರದಲ್ಲಿ ತಮಿಳು ಬರವಣಿಗೆ ಇದೆ. ಇನ್ನೊಂದು ಚಿತ್ರದಲ್ಲಿ ಲೋಕಸಭಾ ಸದಸ್ಯರ ಫೋಟೋ ಇದೆ. ಯಾರು ನೀರು ಕೊಡುವುದು? ಏನು ಅವರು ಅವರ ಸ್ವಂತ ಮನೆಯಿಂದ ನೀರು ಕೊಡುತ್ತಾರೆಯೇ?

ಶ್ರೀ ಬಿ.ಪಿ. ವೆಂಕಟಮುನಿಯಪ್ಪ (ಬೇತಮಂಗಲ) : ಈಗಾಗಲೇ ನಮ್ಮ ಮಾನ್ಯ ಶಾಸಕರಾದ ರಾಜೇಂದ್ರನ್‌ರವರು. ಕೆಜಿಎಫ್‌ನಲ್ಲಿರುವ ನೀರಿನ ಸಮಸ್ಯೆ,

ಬೇತ ಮಂಗಲ ಕೆರೆಗೆ ಬೇಕಾದಂತ ಪೋಷಕ ಕಾಲುವೆಗಳ ವಾಟಾಳ್ ನಾಗರಾಜ್‌ರವರು ಬಹಳಷ್ಟು ಮುಖ್ಯವಾದ ವಿಚಾರ ಹೇಳಿದರು. ಈ ವಿಚಾರವಾಗಿ ಇನ್ನೂ ಬರುತ್ತಾ ಬರುತ್ತಾ, ಕೋಲಾರ ಜಿಲ್ಲೆ ಅವರು ಹೇಳಿದ ಹಾಗೆ, ತಮಿಳುನಾಡಿಗೋ, ಆಂಧ್ರಕ್ಕೋ ಹೋಗಬೇಕೋ ಎನ್ನುವ ಯೋಚನೆ ನಮಗೂ ಬರುತ್ತಿದೆ.

ಸ್ವಾತಂತ್ರ್ಯ ಬಂದ ನಂತರ ಸುಮಾರು 50 ವರ್ಷಗಳಿಂದ ಯಾವ ರೀತಿಯಾಗಿ ನಮ್ಮ ಕೋಲಾರ ಜಿಲ್ಲೆಯನ್ನು ಕಡೆಗಣಿಸುತ್ತಾ ಬರುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಯಾವುದೇ ರೀತಿಯಾದ ಶಾಶ್ವತವಾದ ನೀರಿನ ಸಮಸ್ಯೆಗೆ ನಮಗೆ ಪರಿಹಾರ ಕೊಡುವಂಥ ವ್ಯವಸ್ಥೆ ಮಾಡಿಲ್ಲ, ನೀರಾವರಿ ಯೋಜನೆಗಳನ್ನು ಮಾಡಲಿಲ್ಲ. ಮಾನ್ಯ ಸದಸ್ಯರು ಡ್ಯಾಂನ ಎತ್ತರ ಏರಿಸುವ ಬಗ್ಗೆ. ನಾವು ಬೇರೆಯವರಿಗೆ ಕೊಡುವುದಿಲ್ಲ, ಅಲ್ಲೇ ಕೊಡಬೇಕೆಂದು ಹೇಳುತ್ತಿದ್ದರು. ಈಗ ಆಲಮಟ್ಟಿ ವಿಚಾರದಲ್ಲಿ ಮಾತನಾಡಬೇಕಾದರೆ ನಮ್ಮದೂ ಒಂದು ಭಾಗವಿದೆ. ಏಕೆ ಈ ವಿಚಾರ ಹೇಳುತ್ತಿದ್ದೇನೆಂದರೆ, ಇಡೀ ಕೋಲಾರ ಜಿಲ್ಲೆಯನ್ನು ಬಹಳಷ್ಟು ಕಡೆಗಣಿಸುತ್ತಿದ್ದಾರೆ. ಇದು ಕೆಜಿಎಫ್‌ಗೆ ಸೀಮಿತವಾಗಿರುವ ಸಮಸ್ಯೆಯಲ್ಲ.

ಅಧ್ಯಕ್ಷರು : ಕೆಜಿಎಫ್‌ನಲ್ಲಿ ಡ್ರೇನೇಜ್ ವ್ಯವಸ್ಥೆ ಮತ್ತು .....

ಶ್ರೀ ಎಸ್. ರಾಜೇಂದ್ರನ್ : ಇದು ಕೋಲಾರ ಜಿಲ್ಲೆಗೆ ಸೇರಿದ್ದು. ಕಾಲಿಂಗ್ ಅಟೆನ್‌ಷನ್‌ಗೆ ಅವರೂ ಸಹಿ ಮಾಡಿದ್ದಾರೆ.

ಶ್ರೀ ಬಿ.ಪಿ. ವೆಂಕಟಮುನಿಯಪ್ಪ : ಇದು ಡ್ರೈನೇಜ್ ಮತ್ತು ನೀರಿನ ಸಮಸ್ಯೆ. ಇವತ್ತಿನ ದಿವಸ ನೀರು ಇದ್ದರೆ, ಡೈನೇಜ್, ಯಾವುದೇ ಇರಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇಡೀ ಕೋಲಾರ ಜಿಲ್ಲೆಯನ್ನು ಇವತ್ತು ಕಡೆಗಣಿಸುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರಲಿಚ್ಛೆಪಡುತ್ತಿದ್ದೇನೆ. ಎಲ್ಲಾ ಶಾಸಕರೂ ಇದರ ಬಗ್ಗೆ ತೀವ್ರವಾದ ಪ್ರತಿಭಟನೆ ಮಾಡಬೇಕಾದರೆ ಪರಿಸ್ಥಿತಿ ಬರುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಬೇರೆ ರಾಜ್ಯಗಳಲ್ಲಿ ಆಶ್ರಯ ಪಡೆಯಬೇಕಾದ ಪರಿಸ್ಥಿತಿ ಬರುತ್ತದೆ. ದಯವಿಟ್ಟು, ಆ ಪರಿಸ್ಥಿತಿಗೆ ತರಬಾರದು. ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು, ಯಾವುದೇ ರೀತಿಯಿಂದ ಒಂದು ಅನುಕೂಲ ಮಾಡಿ ಕೊಡಬೇಕೆಂದು ಕೇಳುತ್ತಾ, ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಹೇಳಿದರು: ಕನ್ನಡದ ಬಗ್ಗೆ ಅಲ್ಲಿಯತನಕ ತಾವು ಬಹಳ ದೂರು ಹೋಗುತ್ತಿದ್ದೀರಿ. ದಯವಿಟ್ಟ ಇದನ್ನು ಗಮನಿಸಬೇಕು. ವಿಧಾನ ಸೌಧದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಹುಶಃ ನಾನು ಸರಿಯಾಗಿ ಓದಿಲ್ಲ, ನಾನು ಊರಿಗೆ ಹೋಗಿದ್ದೆ, ನಿನ್ನೆ ನಮಗೆ ಎಲ್ಲಾ ಶಾಸಕರಿಗೆ ಬಂದ ಪತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವರದಿಯನ್ನು ಇಂಗ್ಲೀಷ್‌ನಲ್ಲಿ ಕಳುಹಿಸಿದ್ದಾರೆ, ಮೊದಲು ಇಲ್ಲಿಯ ಅಧಿಕಾರಿಗಳಿಗೆ ನಾವು ಸೂಚನೆ ಕೊಡಬೇಕು. ದಯವಿಟ್ಟು, ಆ ಕೆಲಸವನ್ನು

ಸರ್ಕಾರ ಖಂಡಿತವಾಗಿ ಮಾಡಬೇಕು. ಅಧಿಕಾರಿಗಳು ಈ ವಿಚಾರದಲ್ಲಿ ನಿರ್ಲಕ್ಷ್ಯತನ ತೋರುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಎಲ್ಲಾ ಇಂಗ್ಲೀಷ್‌ನಲ್ಲಿ ಇರುತ್ತದೆ. ನಿಮ್ಮ ಆಫೀಸ್‌ನಲ್ಲಿ ಕೂಡ ಮತ್ತೆ ಕಳುಹಿಸಿ ಎಂದು ಹೇಳಿದ್ದೇವೆ. ಈಗ ಇಂಗ್ಲೀಷ್‌ನಲ್ಲೇ ಬರುತ್ತಿವೆ. ಆಮೇಲೆ ತಾವೂ ಕೂಡ ಸಂವಿಧಾನದ ಪುಸ್ತಕವನ್ನು ಕಳುಹಿಸಿದ್ದೀರಿ. ಅದನ್ನು ಇಂಗ್ಲಿಷ್‌ನಲ್ಲಿರುವುದನ್ನು ನಮಗೆ ಕಳುಹಿಸಿದ್ದೀರಿ. ಕನ್ನಡದ ಪುಸ್ತಕ ಸಿಗುವುದಿಲ್ಲವೇ? ಪ್ರಿಂಟ್ ಆಗಿಲ್ಲವೇ?

ಅಧ್ಯಕ್ಷರು : ಕನ್ನಡ ಪುಸ್ತಕ ಕಳುಹಿಸಬೇಕಾಗಿತ್ತು. ಕನ್ನಡದಲ್ಲೂ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ತಮ್ಮ ಆಫೀಸ್‌ನವರು ಅದನ್ನು ತರಿಸಬೇಕಾಗಿತ್ತು. ಎಲ್ಲರಿಗೂ ಇಂಗ್ಲೀಷ್ ಪುಸ್ತಕ ಕೊಟ್ಟಿದ್ದೀರಿ, ತಾವೇ ಹೀಗೆ ಮಾಡಿದರೆ ಹೇಗೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ ; ತಾವು ಕನ್ನಡ ಚಳುವಳಿ ಬಗ್ಗೆ ಹೋರಾಟ, ಕಳಕಳಿ ಹೊಂದಿರುವವರು.

ಶ್ರೀ ಎಸ್.ಎಸ್. ಪಾಟೀಲ್ : ರಾಜ್ಯದಲ್ಲಿ ಕನ್ನಡ ಉಳಿಸಲು ಎಲ್ಲರೂ ಸೇರಿ ಹೋರಾಟ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ತಾವು ಕನ್ನಡ ಹೋರಾಟಗಾರರಾಗಿ ಬಂದವರು. ಆದುದರಿಂದ, ತಮ್ಮ ಅಧಿಕಾರವಧಿಯಲ್ಲಿ ಕನ್ನಡದಲ್ಲಿ ಜಾರಿಯಾಗುವಂತಹ ವ್ಯವಸ್ಥೆ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ : ಇಂಗ್ಲೀಷ್‌ನಲ್ಲಿ ಬಂದಿದ್ದು ನೋಡಿ ನಮಗೆ ನೋವಾಯಿತು. ತಾವು ನೋಡಿಲ್ಲವೆಂದು ಕಾಣುತ್ತದೆ. ಮತ್ತೆ ಎಲ್ಲವನ್ನೂ ನೋಡುವುದಕ್ಕೆ ಎಲ್ಲಿ ಆಗುತ್ತದೆ? ಇದನ್ನು ನಿಮ್ಮ ಸೆಕ್ರೆಟರಿಯವರು ಮಾಡಬೇಕಾಗಿತ್ತು. ಎಲ್ಲಾ ನಿಮಗೆ ನೋಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಕನ್ನಡ ಪುಸ್ತಕ ತರಿಸಿಕೊಡಬೇಕು. ಎಲ್ಲರಿಗೂ ಈಗಲಾದರೂ ಕನ್ನಡ ಪುಸ್ತಕ ತರಿಸಿಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರೀ ಮತ್ತು ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖಾ ಮಂತ್ರಿಗಳು) : ಹಿರಿಯ ಸದಸ್ಯರು, ಗೌರವಾನ್ವಿತ ಸದಸ್ಯರು ಮಾತನಾಡುವಾಗ ನಾನು ಮಧ್ಯದಲ್ಲಿ ಎದ್ದು ನಿಂತುಕೊಂಡರೆ, ಮಂತ್ರಿಗಳು ಮಾತನಾಡುವುದಕ್ಕೂ ಅವಕಾಶ ಕೊಡುವುದಿಲ್ಲವೆಂದು ಹೇಳುತ್ತಾರೆ. ಹೊಸ ಸದಸ್ಯರು ಮಾತನಾಡುವಾಗ, ಗಮನ ಸೆಳೆಯುವ ಸೂಚನೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದು ತಮಗೆ ಗೊತ್ತಿದೆ. ಅವರು ಮಾತನಾಡಲಿ, ಸ್ವಲ್ಪ ಪ್ರೋತ್ಸಾಹ ಕೊಡೋಣವೆಂದು ಸುಮ್ಮನೆ ಕುಳಿತಿದ್ದೆ, ಇದೇ ಸಂದರ್ಭದಲ್ಲಿ ಮಾನ್ಯ ರಾಜೇಂದ್ರನ್ ಎತ್ತಿರುವ ಸಮಸ್ಯೆ ಬಗ್ಗೆ ಉತ್ತರಿಸುವ ಮುನ್ನ, ಮಾನ್ಯ ವಾಟಾಳ್ ನಾಗರಾಜ್‌ರವರು, ಈ ಸಂದರ್ಭದಲ್ಲಿ ಎತ್ತಿರುವ ವಿಚಾರವೇನಿದೆ ಅದನ್ನು ಅವರ ಜೊತೆಯಲ್ಲಿ ನಾನೂ ಧ್ವನಿಗೂಡಿಸುತ್ತೇನೆ. ಕೆಜಿಎಫ್‌ನಲ್ಲಿ ಎಲ್ಲಾ

ವ್ಯವಹಾರಗಳೂ ಕನ್ನಡದಲ್ಲೇ ಆಗಬೇಕು. ತಮಿಳು ಬರವಣಿಗೆಯನ್ನು ಸರ್ಕಾರದ ಕಡೆಯಿಂದ ಮಾಡಿರುವುದು ಸರಿಯಲ್ಲ. ಅದರ ಬಗ್ಗೆ ನಾನು ವಿಚಾರಿಸುತ್ತೇನೆ. ಅದರ ಬಗ್ಗೆ ಸರ್ಕಾರ ವಿಚಾರಣೆ ಮಾಡುತ್ತದೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಎರಡನೆಯದಾಗಿ, ಮಾನ್ಯ ರಾಜೇಂದ್ರನ್‌ರವರು, ಕಳೆದ ಸಾರಿ ಅವರು ಶಾಸಕರಾಗಿದ್ದಾಗ, ಕೆಜಿಎಫ್ ಬೆಳವಣಿಗೆ ಹಾಗೂ ಅಭಿವೃದ್ಧಿಪಡಿಸಲು ಪ್ರಯತ್ನ ಮಾಡಿದರು. ಅಲ್ಲಿರುವ ಕಾರ್ಖಾನೆಗಳು ಮುಚ್ಚಿ ಹೋಗುತ್ತಿರುವುದರಿಂದ, ಜನರು ವಲಸೆ ಹೋಗುತ್ತಿರುವುದರಿಂದ, ಅಲ್ಲೇನಾದರೂ ಕೈಗಾರಿಕೆಗಳಿಗೆ ಅವಕಾಶ ಕೊಡಬೇಕೆನ್ನುವ ದೃಷ್ಟಿಯಿಂದ ಅತ್ಯಂತ ಪ್ರಾಮಾಣಿಕವಾದ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅದರಲ್ಲಿ ಏನೂ ಸಂಶಯವಿಲ್ಲ. ನಾನು ಆಗ ಸಾರಿಗೆ ಇಲಾಖಾ ಮಂತ್ರಿಯಾಗಿದ್ದೆ. ಬಾಡಿ ಬಿಲ್ಡಿಂಗ್ ಯೂನಿಟ್ ಅನ್ನು ಅಲ್ಲಿ ಹಾಕಿದರೆ ಕೆಲವರಿಗೆ ಕೆಲಸ ಸಿಗಬಹುದೆನ್ನುವ ವಿಚಾರ ಮಾಡಿದ್ದೆ. ಆದರೆ, ಅದು ಅನೇಕ ಕಾರಣಗಳಿಂದ ಆಗಿಲ್ಲ. ಆದರೆ, ಈ ಸಾರಿ ನಾನು ಕೈಗಾರಿಕಾ ಸಚಿವನಾಗಿ, ಅವರಿಗೆ ಭರವಸೆ ಕೊಡುತ್ತಿದ್ದೇನೆ, ಕೋಲಾರ ಜಿಲ್ಲೆಯವರಿಗೂ ಸಹ ನಾನು ಭರವಸೆ ಕೊಡುತ್ತಿದ್ದೇನೆ, ಯಾವ ರೀತಿ ಕೈಗಾರಿಕೆಗಳನ್ನು ಅಲ್ಲಿ ಜನರಿಗೆ ಉದ್ಯೋಗವನ್ನು ಕೊಡುವ ಕೈಗಾರಿಕೆಗಳು, ಉದ್ಯೋಗಗಳನ್ನು ಸೃಷ್ಟಿಸುವ ಕೈಗಾರಿಕೆಗಳು, ಅದು ಫುಡ್ ಪಾರ್ಕ್‌ಗಳಿರಬಹುದು, ಗಾರ್ಮೆಂಟ್ ಮ್ಯಾನುಫ್ಯಾಕ್ಚರಿಂಗ್ ಇರಬಹುದು, ಈ ತರಹದ್ದನ್ನು ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ, ಈಗಾಗಲೇ ಫುಡ್ ಪಾರ್ಕ್ ಮಾಡಲು ಮಾಲೂರಿನಲ್ಲಿ ಜಮೀನನ್ನು ಅಕ್ವಾಯರ್ ಮಾಡಿರುವುದು ಈಗಾಗಲೇ ತಮ್ಮ ಗಮನಕ್ಕೆ ಬಂದಿರಬಹುದು, ಶ್ರೀಮಾನ್ ದೇಶಪಾಂಡೆಯವರು ಕೈಗಾರಿಕಾ ಸಚಿವರಾಗಿದ್ದಾಗ, ಹಿಂದಿನ ಸರ್ಕಾರದಲ್ಲಿ ಆ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅದನ್ನು ನಾನು ಮುಂದುವರೆಸುತ್ತೇನೆ, ಕೈಗಾರಿಕೆಗಳಲ್ಲಿ ನಿಮ್ಮ ಜಿಲ್ಲೆಯನ್ನು ವಿಶೇಷವಾಗಿ ಕೆಜಿಎಫ್‌ಗೆ ಹೆಚ್ಚು ಒತ್ತು ಕೊಟ್ಟು, ಉದ್ಯೋಗ ಕೊಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ. ತಾವೇನು ಹೇಳಿದ್ದೀರಿ, ನಮ್ಮ ಕೆಯುಬ್ಲ್ಯುಎಸ್‌ಎಸ್‌ಬಿ ಎಂಡಿಯವರು 26ನೇ ತಾರೀಖು ಜೂನ್ ತಿಂಗಳಲ್ಲಿ ಬಂದು ತಮ್ಮನ್ನೂ ಸಹ ಭೇಟಿ ಮಾಡಿರುತ್ತಾರೆ. 5 ಟ್ಯಾಂಕರ್‌ಗಳಲ್ಲಿ ನೀರು ಸರಬರಾಜು ಮಾಡಲು ಕಳುಹಿಸಿ ಕ್ರಮ ತೆಗೆದುಕೊಂಡಿರುವುದು ತಮಗೆ ಗೊತ್ತಿರುವ ವಿಚಾರ. ಬೇತಮಂಗಲ ಟ್ಯಾಂಕ್‌ನಲ್ಲಿ ಕಳೆದ ಮೂರು ವರ್ಷಗಳಿಂದ ನೀರಿಲ್ಲ. ಅದು ಟೋಟಲಿ ಡ್ರೈ ಆಗಿದೆ ಎಂಬುದು ತಮಗೆ ಗೊತ್ತಿರುವ ವಿಚಾರ. ಅಲ್ಲಿನ ಮುನಿಸಿಪಾಲಿಟಿ ಕಳೆದ 5 ವರ್ಷಗಳಿಂದ ಈ ಯೋಜನೆ ಮಂಜೂರಾತಿ ಆಗಿದ್ದರೂ ಸಹ ಹಣವನ್ನು ಕಟ್ಟದಿರುವುದರಿಂದ, ಈ ಕೆಲಸ ಪ್ರಾರಂಭವಾಗಲಿಲ್ಲ. ಈ ಬರಗಾಲದ ಹೆಡ್‌ನಲ್ಲಿ ಸುಮಾರು 25 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಕಾಮಗಾರಿಗಳಿಗೋಸ್ಕರ ಎಂದು ಸರ್ಕಾರ ಖರ್ಚು ಮಾಡಿದೆ. ಇವತ್ತು ಬೆಳಿಗ್ಗೆ ನಮ್ಮ ಹಣಕಾಸು ಇಲಾಖಾ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಈ ಒಂದು ವಾಟರ್ ಸಪ್ಲೈ ಸ್ಕೀಂ, ಡ್ರೇನೇಜ್ ಸ್ಕೀಂ ಯೂಜಿಡಿ ಎಂದೇನು

ತಾವು ಕೇಳುತ್ತಿದ್ದೀರಿ, ಇದನ್ನು ರಿವ್ಯೂ ಮಾಡಿದ್ದಾರೆ, ಅದನ್ನು ಯಾವ ರೀತಿ ಮಂಜೂರಾತಿ ಮಾಡಬೇಕು, ಈಗ ಮುನಿಸಿಪಾಲಿಟಿಯವರು ಹಣ ಕಟ್ಟದಿರುವುದರಿಂದ, ಯಾವ ರೀತಿ ಕಾರ್ಯಕ್ರಮವನ್ನು ಮಾಡಬೇಕೆನ್ನುವ ಬಗ್ಗೆ ಬೆಳಿಗ್ಗೆ ತಾವು ಪ್ರಶ್ನೆ ಕಳುಹಿಸಿರುವ ಹಿನ್ನೆಲೆಯಲ್ಲಿ ಅವರು ಸಭೆ ಮಾಡಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ, ಸಭೆ ಮಾಡಿ ಈ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದ್ದಾರೆ. ಬೇತ. ಮಂಗಲ ಟ್ಯಾಂಕ್ ಅನ್ನು ಡೀಸಿಲ್ಟ್ ಮಾಡಲು ಸುಮಾರು 10 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟ್ ತಯಾರಿಸಿದ್ದಾರೆ, ಎಸ್ಟಿಮೇಟ್ ಮಾಡಿದ್ದಾರೆ, ಬಿಜಿಎಂಎಲ್ ಫ್ಯಾಕ್ಟರಿಯವರು ಇದನ್ನು ಭಾಗಶಃ ಮಾಡಲು ಸ್ವತಃ ಮುಂದೆ ಬಂದಿದ್ದಾರೆ, ನಾನು ನಿಮಗೆ ಭರವಸೆ ಕೊಡುತ್ತೇನೆ, ಈ ಅಧಿವೇಶನ ಮುಗಿದ ನಂತರ, ನಾನೂ ಸಹ ನಿಮ್ಮ ಜೊತೆ ಇದ್ದೇನೆ, ಕೆಜಿಎಫ್ ಅನ್ನು ಕನ್ನಡೀಕರಣ ಮಾಡುವುದು, ಅದು ಕನ್ನಡನಾಡಿನ ಒಂದು ಭಾಗ, ಅಲ್ಲಿ ಯಾವುದೇ ಕಾರಣಕ್ಕೂ ಕನ್ನಡದ ವಿರುದ್ಧವಾಗಿರುವ ಚಟುವಟಿಕೆಗಳು ನಡೆಯಲು ನಾವು ಅವಕಾಶ ಕೊಡುವುದಕ್ಕಾಗುವುದಿಲ್ಲ ಮತ್ತು ಅದರ ಬೆಳವಣಿಗೆಗಾಗಿ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ನಾನು, ನೀವು, ಮಾನ್ಯ ವಾಟಾಳ್ ನಾಗರಾಜ್‌ರವರು, ಎಲ್ಲರೂ ಮುಖ್ಯಮಂತ್ರಿಗಳ ಜೊತೆಯಲ್ಲಿ ಕುಳಿತು, ಈ ಸಮಸ್ಯೆ ಬಗೆಹರಿಸಲು ಮತ್ತು ಅಲ್ಲಿರುವ ಡ್ರೇನೇಜ್ ಸಿಸ್ಟಂ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡೋಣ, ಈ ಸರ್ಕಾರ ಸಹ ಆ ಪ್ರಯತ್ನ ಮಾಡುತ್ತದೆನ್ನುವ ಭರವಸೆಯನ್ನು ತಮ್ಮ ಮೂಲಕ ಗೌರವಾನ್ವಿತ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕೋಲಾರ ಚಿನ್ನದ ಗಣಿ ಒಂದೇ ಅಲ್ಲ, ಗಡಿನಾಡು ಪ್ರದೇಶದಲ್ಲಿ ತಮ್ಮದು ಒಂದು ನೀತಿಯಾಗಲಿ, ಕನ್ನಡದ ಸಮಗ್ರ ಬೆಳವಣಿಗೆ ಒಂದು ನೀತಿ ಮಾಡಿ. ಎಲ್ಲೋ ಯಾವುದೋ ಒಂದಕ್ಕೆ ಮಾಡುವುದಲ್ಲ. ಇಡೀ ಸಮಗ್ರ ಕರ್ನಾಟಕದ ಗಡಿನಾಡು ಪ್ರದೇಶದಲ್ಲಿ ಇಂಥ ಪ್ರಶ್ನೆ ಬಂದಾಗ, ಸಮಗ್ರವಾಗಿ ಕನ್ನಡದ ಬೆಳವಣಿಗೆ ಏನೇನು ಮಾಡಬೇಕೆಂದು ಒಂದು ನೀತಿಯನ್ನು ತಾವು ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ವಾಟಾಳ್ ನಾಗರಾಜ್‌ರವರು ಈ ಹಿಂದೆ ಗಡಿನಾಡಿನ ಅಭಿವೃದ್ಧಿ ದೃಷ್ಟಿಯಿಂದ ಒಂದು ಭಾಗಶಃ ವರದಿಯನ್ನು ಕೊಟ್ಟಿರುವುದು ನಿಜ. ಅವರಿಗೆ ಬಹಳ ಕಲ್ಪನೆಗಳು ಇವೆ. ಅವರು ನಮ್ಮ ನಾಯಕರು, ಅನೇಕ ಸಂದರ್ಭದಲ್ಲಿ ನಾವು ಅವರು ಚರ್ಚೆ ಮಾಡಿದ್ದೇವೆ, ಗಡಿನಾಡಿನ ಎಲ್ಲಾ ಪ್ರದೇಶಗಳಲ್ಲಿ ಪ್ರವಾಸ ಮಾಡಬೇಕು, ಅಲ್ಲಿರುವ ಜನಗಳ ಕಷ್ಟ ನೋಡಬೇಕು, ಅದನ್ನು ಅಭಿವೃದ್ಧಿಪಡಿಸಬೇಕು ಅದಕ್ಕೆ ಏನೇನು ಮಾಡಬೇಕೆಂದು ಕೆಲವು ಸಲಹೆ ಸೂಚನೆಗಳನ್ನು ತಮ್ಮ ವರದಿಯಲ್ಲಿ ಸಹಿತ ಕೊಟ್ಟಿದ್ದಾರೆ, ನಾನು ಖಂಡಿತವಾಗಿ ಅವರು, ಮತ್ತೊಂದು ಸಲಹೆಯನ್ನು ನಾನು ಕೈಗಾರಿಕಾ ಸಚಿವ ಆದ ಕ್ಷಣಕ್ಕೆ ಕೊಟ್ಟರು, ನೀವು ಏನಾದರೂ ಮಾಡಿ ಈ ಸರೋಜಿನಿ ಮಹಿಷಿ ವರದಿ ಜಾರಿಗೆ

ತರಬೇಕು, ಎಂದು ನಾನು ಈ ಅಧಿವೇಶನದ ನಂತರ ಕನ್ನಡದ ಗಣ್ಯ ವ್ಯಕ್ತಿಗಳನ್ನು, ಬರಹಗಾರರನ್ನು ಕನ್ನಡದ ಪರವಾಗಿ ಇರತಕ್ಕಂಥ ಚಿಂತಕರನ್ನು, ಹಿರಿಯ ಮುಖಂಡರನ್ನು, ಕನ್ನಡ ಪರವಾಗಿ ಹೋರಾಟ ಮಾಡತಕ್ಕಂಥ ತಮ್ಮಂತಹ ನಾಯಕರುಗಳನ್ನು ಮತ್ತು ಸಾಹಿತಿಗಳನ್ನು, ಕೈಗಾರಿಕೋದ್ಯಮಗಳನ್ನು, ಅಧಿಕಾರಿಗಳನ್ನು ಎಲ್ಲರ ಸಹಿತ ಕರೆದು ಸರೋಜಿನಿ ಮಹಿಷಿ ವರದಿ ಜಾರಿಗೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ವಿಚಾರವನ್ನು ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾಡುತ್ತೇನೆ ಎಂದು ಪ್ರಸ್ತಾಪ ಮಾಡಿದ್ದೇನೆ. ತಾವು ಏನು ಗಡಿನಾಡು ಪ್ರದೇಶದಲ್ಲಿರತಕ್ಕಂಥ ಕನ್ನಡಿಗರ ವಿಚಾರದಲ್ಲಿ ಹೇಳಿದ್ದೀರಿ, ನಮ್ಮ ಇಡೀ ಈ ಕಡೆ ಕೇರಳ ಇರಬಹುದು. ಆ ಕಡೆ ಮಹಾರಾಷ್ಟ್ರ ಇರಬಹುದು, ಆಂಧ್ರ ಪ್ರದೇಶ ಇರಬಹುದು, ತಮಿಳುನಾಡು ಇರಬಹುದು, ಈ ಎಲ್ಲಾ ರಾಜ್ಯಗಳಿಗೆ ಸಂಬಂಧಪಟ್ಟಂತೆ ಗಡಿಪ್ರದೇಶದ ಅಭಿವೃದ್ಧಿ ತಮಗೆ ಗೊತ್ತಿರುವ ಹಾಗೆ ನಾನೂ ಸಹಿತ ಇದರ ಬಗ್ಗೆ ಬಹಳ ಕಾಳಜಿ ಇರತಕ್ಕಂಥವನು. ಬೀದರ್ ಇಂಥ ಕಡೆಗಳಲ್ಲಿ ಒಂಟೆಗಳ ಮೂಲಕ ನೀರನ್ನು ತೆಗೆದುಕೊಂಡು ಹೋಗುತಕ್ಕಂಥದ್ದನ್ನು ನಾವು ಕಂಡಿದ್ದೇವೆ, ನಮ್ಮ ಕಾರ್‌ದ್‌ನ ಶಾಸಕರು ಇಲ್ಲಿ ಇಲ್ಲ, ಒಂಟೆಗಳ ಮೂಲಕ ನೀರನ್ನು ಸಾಗಿಸುವ ಕಾಲವಿತ್ತು. ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿರತಕ್ಕಂಥ ಸಂದರ್ಭದಲ್ಲಿ ಇಡೀ ಗಡಿನಾಡಿನ ಪ್ರದೇಶಕ್ಕೆಂದು ಒಂದು ವಿಶೇಷವಾದ ಯೋಜನೆಯನ್ನು ಹಾಕಿದ್ದರು, ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಈ ಗಡಿನಾಡಿನ ಅಭಿವೃದ್ಧಿಗಾಗಿ ಪ್ರತಿ ತಾಲ್ಲೂಕಿಗೂ 25 ಲಕ್ಷ ರೂಪಾಯಿ ಕೊಡತಕ್ಕಂಥ ಒಂದು ಯೋಜನೆಯನ್ನು ಸಹ ಹಾಕಿಕೊಂಡಿದ್ದರು. ಮುಖ್ಯಮಂತ್ರಿಗಳೂ ಹಾಗೂ ಉಪ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಅವರು ಈ ಸಭೆಯ ನಾಯಕರು, ತಮ್ಮ ವಿಚಾರವನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಸಚಿವ ಸಂಪುಟದಲ್ಲಿ ನಾನು ಇದರ ಬಗ್ಗೆ ಚರ್ಚಿಸಿ ಸಮಗ್ರವಾದ ನೀತಿಯನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಂಸದರ ನಿಧಿ, ಶಾಸಕರ ನಿಧಿ, ಇವುಗಳನ್ನು ಕೊಡಬೇಕಾದರೆ ಶಾಸಕರ ನಿಧಿಯಿಂದ ಈ ಕಾಮಗಾರಿ, ಸಂಸದರ ನಿಧಿಯಿಂದ ಈ ಕಾಮಗಾರಿ, ಎಂದು ಬೇಕಾದರೆ ಹಾಕಿಕೊಳ್ಳಲಿ. ಆದರೆ ಅವರ ಫೋಟೋ ಹಾಕುವುದು, ಅವರ ಹೆಸರು ಹಾಕುವುದು, ಇಡೀ ಸರ್ಕಾರವನ್ನೇ ಆಸಡ್ಡೆ ಮಾಡಿ ದೊಡ್ಡ ದೊಡ್ಡದಾಗಿ ಅವರು ಹೆಸರುಗಳನ್ನು ತುಂಬಿದರೆ, ಇದು ಯಾರಪ್ಪನ ಮನೆ ದುಡ್ಡು ಖರ್ಚು ಮಾಡುತ್ತಿದ್ದೇವೆ? ಇದಕ್ಕೆಲ್ಲಾ ಒಂದು ಇತೀಶ್ರೀ ಹಾಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಫೋಟೋಗಳು, ಟ್ಯಾಂಕರ್ ಮೇಲೆ ಎಂಪಿ ಫೋಟೋಗಳು ಹಾಕುವುದು ಎಂದರೆ ಏನು ಸಾರ್? ಯಾವುದಾದರೂ ಕಟ್ಟಡ ನೋಡಿದರೂ ಇಂಥ ಎಂಪಿ ಕಟ್ಟಡ, ಎಂಪಿ ಕಟ್ಟಡ, ಎಂದು ಕಟ್ಟಿಕೊಂಡು ಬಂದರೆ, ಈ ರಾಜ್ಯಕ್ಕೆ ಏನಾದರೂ ಗೌರವ ಉಳಿಯುತ್ತದಾ? ತಾವು ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ, ಇದನ್ನು ತಕ್ಷಣ ನಿಲಿಸಬೇಕಾಗಿದೆ.

ಶ್ರೀ ಎಸ್. ರಾಜೇಂದ್ರನ್ : ನನಗೆ ಏನೆಂದರೆ, ಸಪೋಸ್ ವಾಟರ್ ಟ್ಯಾಂಕ್‌ಗೆ ಎಂಪಿ ಫಂಡ್ ಬಂತು ಎಂಪಿ ಫೋಟೋ ಬರೆದರು. ಟಾಯಲ್ಟ್‌ಗೆ ಫಂಡ್ ಕೊಟ್ಟರೆ ಹೇಗೆ ಮಾಡುತ್ತಾರೆ? ಲೇಡಿಸ್ ಟಾಯಲ್ಟ್‌ಗೆ ಇವರ ಫೋಟೋ ಬರೆಯುವುಕ್ಕಾಗುತ್ತದಾ? ಅದನ್ನೂ ಸ್ವಲ್ಪ ಕ್ಲಿಯರ್ ಮಾಡಬೇಕು. ಅದಕ್ಕೆ ಫಂಡ್ ಕೊಡುತ್ತಿದ್ದಾರೆ. So, this has to be removed as quickly as possible ಅದು ತಪ್ಪಾಗುತ್ತದೆ, ಅದರ ಜೊತೆಗೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಾಧುಸ್ವಾಮಿಯವರು, ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾರಪ್ಪನ ಮನೆಯಿಂದ ದುಡ್ಡು ತಂದಿರತಕ್ಕಂಥದ್ದನ್ನು. ಎನ್ನತಕ್ಕಂಥ ಮಾತನ್ನು ಸಂಸತ್ ಸದಸ್ಯರ ಮಾತುಗಳನ್ನು ಹೇಳತಕ್ಕಂಥ ಹಿನ್ನೆಲೆಯಲ್ಲಿ ಹೇಳಿದರು. ಯಾರ ಮನಸ್ಸನ್ನು ಸಹಿತ ನಾವು ನೋಯಿಸುವುದು ಬೇಡ. ಅದು it is not an unparliamentary word, but even then I request the Hon'ble Member, ದಯಮಾಡಿ ತಾವು ಅದನ್ನು ವಾಪಸ್ ಪಡೆಯಬೇಕೆಂದು ನಾನು ಈ ಸಂದರ್ಭದಲ್ಲಿ ಮನವರಿಕೆ ಮಾಡಿಕೊಳ್ಳುತ್ತೇನೆ. ಈಗ ಏನಾಗಿದೆ

ಎಂದರೆ, ಮಾನ್ಯ ಮಾಧುಸ್ವಾಮಿಯವರೇ, ತಾವು ದಯವಿಟ್ಟು ಸ್ವಲ್ಪ ತಾಳ್ಮೆಯಿಂದ ಕೇಳಿ, ನಾನು ನೀವು ಹೇಳುವುದು ತಪ್ಪು ಎಂದು ಹೇಳುವುದಿಲ್ಲ. ಆದರೆ ಯಾರಪ್ಪನ ಮನೆಯಿಂದ ಎಂದು ಹೇಳಿ, ಹೊಸದಾಗಿ ಬಂದಿರತಕ್ಕಂಥ ಸದಸ್ಯರು ಮಾತನಾಡಿದರೆ ಪರವಾಗಿಲ್ಲ. ನಾನು ನೀವು ಮಾತನಾಡಿದರೆ ಅದು ಸರಿಹೋಗುವುದಿಲ್ಲ. ಎರಡನೇಯದಾಗಿ, ಶಾಸಕರ ನಿಧಿಯಿಂದ ಮಾಡಿಸಿತಕ್ಕಂಥದ್ದು ಎಂದು ಅನೇಕ ಕಡೆಯಲ್ಲಿ ನೋಡಿದ್ದೇವೆ, ರೋಡ್‌ಗಳನ್ನು ಮಾಡಿರಸಿರತಕ್ಕಂಥದ್ದು ಎಂದು ಬೋರ್ಡ್‌ಗಳನ್ನು ಹಾಕಿದ್ದೇವೆ. ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸಹಿತ ಅನೇಕ ಕಡೆಗಳಲ್ಲಿ ನಾವು ಮಾಡಿಸಿರತಕ್ಕಂಥದ್ದು ಎಂದು ಬೋರ್ಡ್ ಹಾಕಿಸಿರುವಂಥದ್ದನ್ನು ನಾವು ಅನೇಕ ಕಡೆಗಳಲ್ಲಿ ನೋಡಿದ್ದೇವೆ, ಹಾಗೆಯೇ ಸಂಸತ್ ಸದಸ್ಯರುಗಳು ತಾವು, ಎರಡು ಕೋಟಿ ರೂಪಾಯಿ ನಿಧಿ ಬರುತ್ತದೆ, ಕೇಂದ್ರ ಸರ್ಕಾರ ಸರ್ಕ್ಯೂಲರ್ ಕಳುಹಿಸಿದೆ, ಈಗ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಕೇಂದ್ರ ಸರ್ಕಾರದವರು ಸಹಿತ ಪ್ರಧಾನ ಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆಯಲ್ಲಿ ಲೋಕ ಸಭಾ ಸದಸ್ಯರು ಸೂಚನೆ ಮಾಡಿದ್ದನ್ನೇ ತೆಗೆದುಕೊಳ್ಳಬೇಕೆಂದು ಒಂದು ವಿಚಾರವನ್ನೂ ಸಹಿತ ಮನಗಂಡಿದ್ದಾರೆ, ಆದುದರಿಂದ, this is not a forum. ಈ ಒಂದು ವೇದಿಕೆಯಲ್ಲಿ ನಾವು ಆ ಒಂದು ಸರ್ಕಾರಕ್ಕೆ ಸಲಹೆಗಳನ್ನು ಕೊಡುವುದಕ್ಕಾಗುವುದಿಲ್ಲ. ಆದುದರಿಂದ, ಇದನ್ನು ಅವರೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ, ಅವರೇ ಅವರೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ, ಆದುದರಿಂದ ಲೋಕ ಸಭಾಸದಸ್ಯರಿಗೆ ಅಥವಾ ವಿಧಾನ ಸಭಾ ಸದಸ್ಯರು ಹಾಕಿಕೊಂಡಿರತಕ್ಕಂಥ ಹೆಸರುಗಳ ಬಗ್ಗೆ ನಾವು ನೀವು ಲಘುವಾಗಿ ಮಾತನಾಡತಕ್ಕಂಥದ್ದು ಸೂಕ್ತವಲ್ಲವೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಂಸದರ ನಿಧಿಯಿಂದ ಆದದ್ದು ಎಂದು ಹಾಕಿಕೊಳ್ಳಲಿ. ಪರ್ಟಿಕ್ಯೂಲರ್ ಆಗಿ ಅವರ ಹೆಸರು ಹಾಕುವುದು, ಫೋಟೋ ಹಾಕುವುದು, 2 ಲಕ್ಷ ರೂ 20 ಲಕ್ಷ ರೂ 30 ಲಕ್ಷ ರೂ ಸ್ಕೀಂ ಮಾಡಿದ್ದ ಕಡೆ 50 ಸಾವಿರ 60 ಸಾವಿರ ರೂ ಕೊಟ್ಟುಬಿಟ್ಟು ಅವರ ಹೆಸರು ಹಾಕಿಸಿಕೊಂಡು ಯೋಜನೆಗಳು ಎಲ್ಲಾ ಮಾಡುತ್ತೇವೆಂದರೆ ಅದನ್ನು ಕೇಳುವುದು ತಪ್ಪಾ? ಯಾರದ್ದು ಸಾರ್ ಆ ದುಡ್ಡು? ಅದು Tax payer money

ಅಧ್ಯಕ್ಷರು : ಆ ಸಂದರ್ಭದಲ್ಲಿ ಏನಾದರೊಂದು ಸರ್ಕಾರದ ನೀತಿಯನ್ನು ಅನುಸರಿಸುವುದು ಒಳ್ಳೆಯದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಏನಾದರೊಂದು ನೀತಿ ತಾವು ಮಾಡಬೇಕು. ಸಂಸದರ ನಿಧಿ ನಾವು ಬೇಡ ಎಂದಿಲ್ಲ. ಲೋಕಲ್ ಏರಿಯಾ ಎಂಪಿ ಫಂಡ್ ಎಂದು ಮೊದಲು ಎಲ್ಲಾ ಬೋರ್ಡ್ ಹಾಕಿದ್ದು ನಾವು ಬೇಡ ಎಂದಿಲ್ಲ. ಶಾಸಕರ ನಿಧಿ ಎಂದು ಬೋರ್ಡ್ ಹಾಕಿರುವುದು. ನಾನು ಬೇಡ ಎಂದಿಲ್ಲ. ಅವರ ಹೆಸರುಗಳನ್ನು ಯಾಕೆ ಹಾಕಬೇಕು? ಒಂದು ನವಗ್ರಾಮ ಮಾಡಿದರೆ ಅಲ್ಲಿಗೊಂದು ಎಂಪಿ ಹೆಸರು ಹಾಕು, ಊರಿಗೇ ಎಂಎಲ್ಎ ಹೆಸರು ಇಡು, ಈ ಸ್ಥಿತಿಗೆ ನಾವು ಬರಬೇಕಾ? ನಾವು ಹತ್ತು ಎಕರೆ ಜಮೀನು ಕೊಡುತ್ತೇವೆಂದರೆ ಒಬ್ಬ ದಾನಿಯ ಹೆಸರು ಹಾಕುವುದಕ್ಕೆ ಸರ್ಕಾರ ತಯಾರಿಲ್ಲ, ಹೀಗಿರುವಾಗ ಸರ್ಕಾರದ ದುಡ್ಡು ಖರ್ಚು ಮಾಡಿ, ಜನಪ್ರತಿನಿಧಿಗಳ ಹೆಸರು ಏಕೆ ಹಾಕಬೇಕು? ದಯಮಾಡಿ ತಾವೂ ಏನಾದರೂ ಒಂದು ನೀತಿ ಮಾಡಿ. ವೈಯಕ್ತಿಕವಾಗಿ ಅವರ ಹೆಸರುಗಳನ್ನು ಹಾಕುವುದು ನಿಲ್ಲಿಸಬೇಕು.

ಶ್ರೀ ಎಸ್. ರಾಜೇಂದ್ರನ್ : ನಮ್ಮ ಮುಖ್ಯಮಂತ್ರಿಗಳು ಇಲ್ಲಿ ಬಂದಿದ್ದಾರೆ, ನಮ್ಮ ಮಂತ್ರಿಗಳಿಗೆ ಕೇಳುತ್ತೇನೆ, ಕೆಜಿಎಫ್ ಸಿಟಿಗೆ ಒಂದು ಸ್ಪೆಷಲ್ ಪ್ಯಾಕೇಜ್ ಕೊಡಬೇಕು. ಅದರಿಂದ ಕೆಜಿಎಫ್ ಸಿಟಿಗೆ ಅನುಕೂಲವಾಗುತ್ತದೆ ಒಂದು ಸ್ಪೆಷಲ್ ಪ್ಯಾಕೇಜ್ ಕೊಡಲೇಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಸರ್ಕಾರ ಅದಕ್ಕೆ ದಯವಿಟ್ಟು ಉತ್ತರ ಕೊಡಬೇಕು. Let them just develop the KGF city ಬಂಗಾರ ಕೊಟ್ಟು ಕೊಟ್ಟು ನಮ್ ಊರು ಈ ಸ್ಥಿತಿಗೆ ಬಂದಿದೆ. ಅದರಿಂದ ಕೆಜಿಎಫ್ ಸಿಟಿಗೆ ಅನುಕೂಲವಾಗುತ್ತದೆ, ಎಂದು ಒಂದು ಸ್ಪೆಷಲ್ ಪ್ಯಾಕೇಜ್ ಕೊಡಲೇ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಸರ್ಕಾರ ಅದಕ್ಕೆ ದಯವಿಟ್ಟು ಉತ್ತರ ಕೊಡಬೇಕು. ಬಂಗಾರ ಕೊಟ್ಟು ಕೊಟ್ಟು ನಮ್ಮ ಊರು ಈ ಸ್ಥಿತಿಗೆ ಬಂದಿದೆ. ಇಡೀ ದೇಶಕ್ಕೆ ಕೊಟ್ಟಿದೆ, ಇಡೀ ರಾಜ್ಯಕ್ಕೆ ಕೊಟ್ಟಿದೆ, ಮೈಸೂರು ಮಹಾರಾಜರ ಕಾಲದಿಂದ ಕೊಟ್ಟಿದೆ, ಹೀಗೆ ಸುಂದರವಾಗಿರುವ ಟೈಮ್‌ನಲ್ಲಿ ಅವಳ ಮಾರ್ಕೆಟ್ ದಿಲ್ಲಿ, ಅಲ್ಲಿ ಇಲ್ಲಿ ಎಲ್ಲಾ ತೆಗೆದುಕೊಂಡು ಹೋದರು, ಈಗ ಮುದುಕಿ ಆಗಿದ್ದಾಳೆ, ಅಂತ ಸ್ಥಿತಿಗೆ ನಮ್ಮ ಸಿಟಿ ಬಂದಿದೆ,

ಶ್ರೀ ಪಿ.ಜಿ.ಆರ್. ಸಿಂಧ್ಯ : ಖಂಡಿತವಾಗಿ ಸಹಿತ ನಾನು, ನೀವು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಅಧಿವೇಶನ ಮುಗಿದ ನಂತರ,

ಮುಖ್ಯಮಂತ್ರಿಗಳೂ ಹಾಗೂ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಕುಳಿತುಕೊಂಡು, ಕೆಜಿಎಫ್ ಪಟ್ಟಣಕ್ಕೆ ಬಂದಿರತಕ್ಕಂಥ ಖಾಯಿಲೆಗಳು ಏನು ಇವೆ ಅವನ್ನೆಲ್ಲಾ ಸರಿಪಡಿಸಲಿಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿದ್ದೇನೆ, ಮತ್ತೆ ಕನ್ನಡದ ವಿರುದ್ಧವಾಗಿರತಕ್ಕಂಥ ಚಟುವಟಿಕೆಗಳಿಗೆ ತಾವು ಪ್ರೋತ್ಸಾಹಿಸಬಾರದು, ತಾವು ಕನ್ನಡಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ತಾವು ಕನ್ನಡದಲ್ಲಿ ಮಾತನಾಡಲಿಕ್ಕೆ ಪ್ರಾರಂಭ ಮಾಡಿದ್ದೀರಿ, ಬಹಳ ಚೆನ್ನಾಗಿ ಮಾತನಾಡಿದ್ದೀರಿ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಪ್ರಶಂಸೆ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಅಧಿಕಾರಿಗಳು ಶಾಮೀಲಾಗಿ ಅವರು ಮಾಡಿರುವ ಕೆಲಸ ಇದು. ನಾನು ಮಾಡಿಲ್ಲ. ಅಧಿಕಾರಿಗಳಿಗೆ ದಂಡನೆ ಮಾಡಿ, ಅವರು ಮಾಡಿರುವ ತಪ್ಪು ಅದು, ನಾನು ಮಾಡಿಲ್ಲ.

SRI P.G.R. SINDIA : I have appreciated.

SRI S. RAJENDRAN : Thank You very much sir, and I hope the same thing will be in the KGF city....

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 3ನೇ ಆಗಸ್ಟ್ ಮಾಹೆ 2004ರಂದು ಬೆಳಿಗ್ಗೆ 11–00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)